**CC 1258/2024**

**PW-01**

**ಸಾಕ್ಷಿಗೆ ದಿನಾಂಕ: 11.06.2025 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ MMK ರವರಿಂದಃ**

ನಾನು 6ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಫಿರ್ಯಾದಿಯಲ್ಲಿ ಬರೆದಿರುವ ಎಲ್ಲಾ ವಿಷಯಗಳು ನನಗೆ ಗೊತ್ತಿರುತ್ತದೆ. ಸದರಿ ಫಿರ್ಯಾದಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನನಗೆ ಶೇತ್ಕಿ ಬಿಟ್ಟರೆ ಬೇರೆ ಯಾವುದೇ ಉದ್ಯೋಗ ಇರುವುದಿಲ್ಲ. ನಮ್ಮದು ಶೇತ್ಕಿ ಜಮೀನು ಇದೆ ಎಂದು ತೋರಿಸಲು ಮಾನ್ಯ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. SBI ಮತ್ತು DCC ಬ್ಯಾಂಕಗಳಲ್ಲಿ ನನ್ನ ಖಾತೆ ಇರುತ್ತವೆ. ನನ್ನ ಪ್ಯಾನ್ ಕಾರ್ಡ ಸಹ ಇರುತ್ತದೆ. ನಾನು ಯಾವುದೇ ಆದಾಯ ತೆರಿಗೆಯನ್ನು ಕಟ್ಟುವುದಿಲ್ಲ.

ನಾನು ಇರುವುದು ನಿಚ್ಚಣಕಿ ಗ್ರಾಮದಲ್ಲಿ ಎಂದರೆ ನಿಜ. ನಾನು ಹುಟ್ಟಿದಾಗಿನಿಂದಲೂ ನಿಚ್ಚಣಕಿ ಗ್ರಾಮದಲ್ಲಿಯೇ ಇರುತ್ತೇನೆ ಎಂದರೆ ನಿಜ. ನಿಚ್ಚಣಕಿಯಲ್ಲಿ ಗ್ರಾಮ ಪಂಚಾಯತಿ ಇರುತ್ತದೆ ಎಂದರೆ ನಿಜ. ನಾನು ನಿಚ್ಚಣಕಿ ಗ್ರಾಮದವನಾಗಿರುವುದರಿಂದ ನಿಚ್ಚಣಕಿಯ ಅನೇಕ ಜನರ ಪರಿಚಯ ಇರುತ್ತದೆ ಎಂದರೆ ನಿಜ. ಮಡಿವಾಳಪ್ಪ ಬಸವಣ್ಣೆಪ್ಪ ವರಗನ್ನವರ ಇವರ ಪರಿಚಯ ಇದೆ. ಸದರಿ ಮಡಿವಾಳಪ್ಪ ಸಹ ನಿಚ್ಚಣಕಿ ಗ್ರಾಮದವರು ಎಂದರೆ ನಿಜ. ಸದರಿ ಮಡಿವಾಳಪ್ಪ ಮತ್ತು ನನಗೆ ಒಳ್ಳೇಯ ಸ್ನೇಹ ಸಂಬಂಧ ಇದೆ ಎಂದರೆ ನಿಜ. ಹೀಗೆ ಸ್ನೇಹ ಸಂಬಂಧ ಇರುವುದರಿಂದ ಅವರ ಮನೆತನದವರ ಪರಿಚಯ ಇದೆ. ಈ ದಿನ

ನನ್ನ ಜೊತೆ ಸದರಿ ಮಡಿವಾಳಪ್ಪ ಸಹ ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ನಿಜ. ಶ್ರೀಶೈಲ ಮಡಿವಾಳಪ್ಪ ವರಗನ್ನವರ ಇವರು ಮಡಿವಾಳಪ್ಪ ವರಗನ್ನವರ ಇವರ ಮಗ ಎಂದರೆ ನಿಜ. ನನಗೆ ಕಲಾವತಿ ನಾಗಪ್ಪ ಬಬಲಿ ಸಾಃ ಬಸ್ಸಾಪೂರ ಇವರ ಪರಿಚಯ ಇಲ್ಲ. ಸದರಿ ಕಲಾವತಿ ಇವರು ಬೆಂಗಳೂರನಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕಲಾವತಿ ಹಾಗೂ ಮಡಿವಾಳಪ್ಪ ವರಗನ್ನವರ ಇವರು ಸಂಬಂಧಿಕರು ಎಂಬ ವಿಷಯ ನನಗೆ ಗೊತ್ತಿಲ್ಲ.

ಆರೋಪಿತನು ಮರಿಗೇರಿ ಗ್ರಾಮದವರು. ಮರಿಗೇರಿ ಇದು ಒಂದು ಸಣ್ಣ ಹಳ್ಳಿ ಎಂದರೆ ನಿಜ. ಮರಿಗೇರಿ ನಿಚ್ಚಣಕಿಯಿಂದ ಸುಮಾರು 4-5 ಕೀ. ಮೀ ಅಂತರ ಇದೇ ಎಂದರೆ ನಿಜ. ಮರಿಗೇರಿಯ ಮಲ್ಲಪ್ಪ ರುದ್ರಪ್ಪ ಶಿಗಿಹಳ್ಳಿ ಇವರ ಪರಿಚಯ ಇರುತ್ತದೆ. ಲಕ್ಷ್ಮಣ ದಳವಾಯಿ, ಮಾರುತಿ ಹುಣಶಿಕಟ್ಟಿ ಇವರ ಪರಿಚಯ ಇರುವುದಿಲ್ಲ. ಮಲ್ಲಪ್ಪ ಶಿಗಿಹಳ್ಳಿ ಇವರು ಆರೋಪಿತನ ತಮ್ಮ ಎಂದರೆ ನಿಜ. ನನಗೆ ಆರೋಪಿತನು ಸುಮಾರು 10-15 ವರ್ಷಗಳಿಂದ ಪರಿಚಯ ಇರುತ್ತದೆ. ಹೀಗೆ 10-15 ವರ್ಷಗಳಿಂದ ಪರಿಚಯ ಇರುವುದರಿಂದ ಆರೋಪಿತನ ಮನೆತನದ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಅವರು ಒಕ್ಕಲುತನ ಮಾಡುತ್ತಾರೆ ಹೊರತು ಸಂಪೂರ್ಣ ಮಾಹಿತಿ ಇರುವುದಿಲ್ಲ ಎಂದು ಹೇಳುತ್ತಾರೆ. ಸದರಿ 10-15 ವರ್ಷಗಳ ಅವಧಿಯಲ್ಲಿ ನಾನು ಯಾವತ್ತಿಗೂ ಆೆರೂಪಿತನ ಮನೆಗೆ ಹೋಗಿರುವುದಿಲ್ಲ ಅವರೇ ನಮ್ಮ ಮನೆಗೆ ಬರುತ್ತಿದ್ದರು ಎಂದು ಹೇಳುತ್ತಾರೆ.

ಸಿದ್ದವ್ವ ನೀಲಪ್ಪ ನಿಚ್ಚಣಕಿ ಇವರು ಪರಿಚಯ ಇದೆ ಎಂದರೆ ಸಾಕ್ಷಿಯು ಸದರಿಯವಳು ಆರೋಪಿತನ ಹೆಂಡತಿ ಎಂಬುದು ಮಾತ್ರ ಗೊತ್ತು ಬಿಟ್ಟರೆ ಅವರ ಬಗ್ಗೆ ಬೇರೆ ಏನು ಗೊತ್ತಿರುವುದಿಲ್ಲ. ಸದರಿ ಸಿದ್ದವ್ವ ಇವರ ತವರು ಮನೆ ಮರಿಗೇರಿ

ಎಂದರೆ ಸಾಕ್ಷಿಯು ನನಗೆ ಗಂಡನ ಮನೆ ಎಂದು ಮಾತ್ರ ಗೊತ್ತಿರುತ್ತದೆ ಎಂದು ಹೇಳುತ್ತಾರೆ. ಸದರಿ ಸಿದ್ದವ್ವಳಿಗೆ ಮರಿಗೇರಿ ಗ್ರಾಮದಲ್ಲಿ ಅವಳ ತವರು ಮನೆ ಆಸ್ತಿಯಾದ ಸರ್ವೆ ನಂ. 54/1+2 ಕ್ಷೇತ್ರ 5 ಎಕರೆ 11 ಗುಂಟೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನು ಸಿದ್ದವ್ವಳಿಗೆ ಕಿತ್ತೂರ ನ್ಯಾಯಾಲಯದ ಅಸಲು ದಾವೆ ನಂ. 65/2015 ರ ಆದೇಶದ ಮೇರೆಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿಗೆ ಸಂಬಂಧಿಸಿದಂತೆ ಸದರಿ ಸಿದ್ದವ್ವ ಹಾಗೂ ಅವರ ಅಣ್ಣತಮ್ಮಂದಿರ ನಡುವೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಚಾಲ್ತಿಯಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಏಪ್ರಿಲ್ 2022 ರಲ್ಲಿ ಸಿದ್ದವ್ವ ಇವಳು ತನ್ನ ಭಾಗಕ್ಕೆ ಬಂದ ಆಸ್ತಿಯನ್ನು ಮಾರಾಟಕ್ಕೆ ಹಚ್ಚಿದ್ದರು ಎಂದರೆ ನಿಜ. ಸಾಕ್ಷಿಯು ಮುಂದುವರೆದು ಸದರಿ ಆಸ್ತಿಯನ್ನು ನಿಚ್ಚಣಕಿ ಗ್ರಾಮದವರಿಗೆ ವ್ಯವಹಾರ ಮಾಡಿದ ಕಾರಣ ಸದರಿ ಕಾಗದ ಪತ್ರಕ್ಕೆ ಸಾಕ್ಷಿ ಎಂದು ಸಹಿ ಮಾಡಲು ಕೋರಿದ್ದರಿಂದ ಸಹಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಸಿದ್ದವ್ವ ಇವಳು ಮಾರಾಟಕ್ಕೆ ಇಟ್ಟ ತನ್ನ ಆಸ್ತಿಯನ್ನು ಖರೀದಿ ಮಾಡಿಕೊಳ್ಳುವ ಸಲುವಾಗಿ ನಾನು ಹಾಗೂ ಮಡಿವಾಳಪ್ಪ ವರಗನ್ನವರ ಸೇರಿಕೊಂಡು ಮಲ್ಲಪ್ಪ ಶಿಗಿಹಳ್ಳಿ ಹಾಗೂ ಲಕ್ಷ್ಮಣ ದಳವಾಯಿ ಇವರ ಮುಖಾಂತರ ಖರೀದಿಯ ವ್ಯವಹಾರದ ಮಾತುಕತೆ ಮಾಡಿದ್ದೇವು ಎಂದರೆ ನಿಜ. ಸದರಿ ಸಿದ್ದವ್ವಳ ಜಮೀನನ್ನು ಶ್ರೀಶೈಲ ಮಡಿವಾಳಪ್ಪ ವರಗನ್ನವರ ಹಾಗೂ ಕಲಾವತಿ ಬಬಲಿ ಇವರ ಹೆಸರಲ್ಲಿ ಜಮೀನು ಖರೀದಿ ಕರಾರು ಪತ್ರ ಆಗಿರುತ್ತದೆ ಎಂದರೆ ನಿಜ. ಸದರಿ ಖರೀದಿ ವ್ಯವಹಾರವು ಸುಮಾರು 53 ಲಕ್ಷಗಳಿಗೆ ಮುಗಿದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿ ವ್ಯವಹಾರವು ನಮ್ಮ ಮನೆಯಲ್ಲಿ ಮಾತುಕತೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಖರೀದಿ ವ್ಯವಹಾರದ ನಂತರ ಶ್ರೀಶೈಲ ವರಗನ್ನವರ ಹಾಗೂ

ಕಲಾವತಿ ಬಬಲಿ ಇವರು ಮುಂಗಡವಾಗಿ ಸಿದ್ದವ್ವಳಿಗೆ 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮುಂಗಡವಾಗಿ ಕೊಟ್ಟ 5 ಲಕ್ಷ ರೂಪಾಯಿಗಳ ಮೇರೆಗೆ ಮಠದ ನೋಟರಿಯವರ ಹತ್ತಿರ ದಿಃ 14.04.2022 ರಂದು ಖರೀದಿ ಸಂಚಕಾರ ಪತ್ರ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ನಮ್ಮ ಮನೆಯಲ್ಲಿ ಖರೀದಿ ಕರಾರು ಪತ್ರಕ್ಕೆ ಯಾವ ದಿನ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಾನು ಸದರಿ ಖರೀದಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಕೇವಲ ಒಂದು ಕಾಗದ ಪತ್ರಕ್ಕೆ ಮಾತ್ರ ಸಹಿ ಮಾಡಿರುತ್ತೇನೆ. ಸದರಿ ಕರಾರು ಪತ್ರ ಬಿಟ್ಟು ಸಿದ್ದವ್ವ ಹಾಗೂ ಶ್ರೀಶೈಲ ಮತ್ತು ಕಲಾವತಿ ಇವರು ನಡುವೆ ಹೆಚ್ಚಿನ 7 ಲಕ್ಷ ರೂಪಾಯಿಗಳ ಕೊಟ್ಟ ಕುರಿತು ಇನ್ನೊಂದು ಖರೀದಿ ಕರಾರು ಪತ್ರ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಹೀಗೆ ಇನ್ನೊಂದು ಖರೀದಿ ಕರಾರು ಪತ್ರಕ್ಕೆ ನನ್ನ ಸಹಿ ಇರುತ್ತದೆ ಎಂದರೆ ನಿಜ. ನಾನು ಸಹಿ ಮಾಡಿದ ಕರಾರು ಪತ್ರದಲ್ಲಿ ಏನು ಬರೆದಿರುತ್ತಾರೆ ಎಂದು ಓದಿ ತಿಳಿದುಕೊಳ್ಳದೇ ಸಾಕ್ಷಿ ಎಂದ ಕಾರಣ ಹಾಗೆ ಸಹಿ ಮಾಡಿರುತ್ತೇನೆ. ಸಿದ್ದವ್ವ ಮತ್ತು ಶ್ರೀಶೈಲ ಹಾಗೂ ಕಲಾವತಿ ನಡುವೆ ಆದ ಕರಾರು ಪತ್ರಗಳ ಮೂಲ ಪ್ರತಿಯು ಶ್ರೀಶೈಲ ಮತ್ತು ಕಲಾವತಿಯ ಹತ್ತಿರವೇ ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕರಾರು ಪತ್ರಗಳಲ್ಲಿ ಸಿದ್ದವ್ವಳು ಮಾನ್ಯ ಉಚ್ಚ ನ್ಯಾಯಾಲಯದ ಪ್ರಕರಣ ಇತ್ಯರ್ಥ ಪಡಿಸಿಕೊಂಡು ಜಮೀನಿಗೆ ತನ್ನ ಹೆಸರನ್ನು ದಾಖಲಿಸಿಕೊಂಡ ನಂತರ ಶ್ರೀಶೈಲ ಹಾಗೂ ಕಲಾವತಿಗೆ ಖರೀದಿ ಕೊಡುವ ಕರಾರು ಇತ್ತು ಎಂದರೆ ನನಗೆ ಗೊತ್ತಿಲ್ಲ. ಇಲ್ಲಿಯವರೆಗೂ ಸಹ ಸದರಿ ಜಮೀನಿನ ಕರಾರು ಪತ್ರದಂತೆ ಖರೀದಿ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ದಿಃ 03.01.2023 ರಂದು ಆರೋಪಿತನು 5 ಲಕ್ಷ ರೂಪಾಯಿಗಳನ್ನು ಕೇಳಲು ನನ್ನ ಹತ್ತಿರ ಯಾರು ಯಾರು ಬಂದಿದ್ದರು ಎಂದರೆ ಸಾಕ್ಷಿಯು ಆರೋಪಿ ಹಾಗೂ

ಅವನ ಜೊತೆ ಇನ್ನು ಕೆಲವು ಜನ ಬಂದಿದ್ದರು ಆದರೆ ಅವರ ಹೆಸರು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಹಣದ ವ್ಯವಹಾರಕ್ಕಿಂತ ಮುಂಚೆ ಆರೋಪಿತನ ಜೊತೆ ಯಾವುದೇ ಹಣದ ವ್ಯವಹಾರವನ್ನು ಮಾಡಿರುವುದಿಲ್ಲ. ಆರೋಪಿತನು ನನ್ನ ಮನೆಗೆ ಹಣ ಕೇಳಲು ಬಂದ ಸಮಯದಲ್ಲಿ ನಮ್ಮ ಮನೆಯಲ್ಲಿ ಈರಪ್ಪ ಕುಡಲಗಿ ಹಾಗೂ ಆಶೋಕ ಹಿತ್ತಲಮನಿ ಎಂಬ ನಮ್ಮ ಸ್ನೇಹಿತರು ಇದ್ದರು. ಈರಪ್ಪ ಕುಡಲಗಿ ಇವರು ಬಾಂಡ ರೈಟ್‌ರ ಎಂದರೆ ನಿಜ.  ಸಿದ್ದವ್ವ ಮತ್ತು ಶ್ರೀಶೈಲ ಹಾಗೂ ಕಲಾವತಿ ನಡುವೆ ಆಗಿರುವ ಕರಾರು ಪತ್ರಗಳನ್ನು ಈರಪ್ಪ ಕುಡಲಗಿ ಇವರೇ ತಯಾರಿಸಿರುತ್ತಾರೆ ಎಂದರೆ ನಿಜ. ನಾನು ಆರೋಪಿತನಿಗೆ 5 ಲಕ್ಷ ಸಾಲ ಕೊಟ್ಟಿರುತ್ತೇನೆ ಎಂದು ಹೇಳಲಾದ ಸಮಯದಲ್ಲಿ ಸಿದ್ದವ್ವ ಹಾಗೂ ಶ್ರೀಶೈಲ ಮತ್ತು ಕಲಾವತಿ ಇವರು ನಡುವೆ ಆದ ಖರೀದಿ ವ್ಯವಹಾರದ ಪೈಕಿ ಸುಮಾರು 12 ಲಕ್ಷ ರೂಪಾಯಿಗಳನ್ನು ಸಿದ್ದವ್ವ ಪಡೆದುಕೊಂಡಿರುವ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಸದರಿ ಖರೀದಿ ಕರಾರು ಪತ್ರಗಳಿಗೆ ಆರೋಪಿ ಹಾಗೂ ಅವರ ಮಕ್ಕಳ ಸಹಿಗಳು ಸಹ ಇರುತ್ತವೆ ಎಂದರೆ ನಿಜ.

ನಾನು ಆರೋಪಿತನಿಗೆ 5 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಟ್ಟಿರುವುದನ್ನು ತೋರಿಸಲು ನಿಪಿ 1 ನ್ನು ಬಿಟ್ಟು ಬೇರೆ ಯಾವುದೇ ದಾಖಲೆಗಳು ಇರುವುದಿಲ್ಲ. ಸದರಿ 5 ಲಕ್ಷ ರೂಪಾಯಿಗಳನ್ನು ಆರೋಪಿತನಿಗೆ ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಆರೋಪಿತನಿಗೆ 5 ಲಕ್ಷ ರೂಪಾಯಿಗಳನ್ನು ಆರೋಪಿತನ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಆರೋಪಿತನಿಗೆ ಹಣ ಕೊಟ್ಟ ಬಗ್ಗೆ ಯಾವುದೇ ಪಾವತಿಯನ್ನು ಮಾಡಿಸಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ.

ಸಿದ್ದವ್ವ ಹಾಗೂ ಶ್ರೀಶೈಲ ಮತ್ತು ಕಲಾವತಿ ನಡುವೆ ಆಗಿರುವ ಖರೀದಿ

ವ್ಯವಹಾರದ ಬಗ್ಗೆ ಸಿದ್ದವ್ವಳಿಗೆ ಕೊಟ್ಟ 12 ಲಕ್ಷ ರೂಪಾಯಿಗಳ ಭದ್ರತೆಗಾಗಿ ಸಿದ್ದವ್ವಳ ಗಂಡನಾದ ಆರೋಪಿತನಿಂದ ಸಹಿ ಮಾಡಿದ ಖಾಲಿ ಚೆಕ್‌ಗಳನ್ನು ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ 1 ನ್ನು ಸಹ ಶ್ರೀಶೈಲ ಹಾಗೂ ಕಲಾವತಿ ಇವರು ಕೊಟ್ಟ ಹಣಕ್ಕೆ ಭದ್ರತೆಗೆ ಕೊಟ್ಟ ಚೆಕ್‌ಗಳ ಪೈಕಿ ಒಂದು ಚೆಕ್ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿತನ ನಡುವೆ ಯಾವುದೇ ಹಣದ ವ್ಯವಹಾರ ಆಗಿರುವುದಿಲ್ಲ ಹಾಗೂ ನಾನು ಆರೋಪಿತನಿಗೆ ಯಾವುದೇ ಸಾಲವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತನಿಗೆ ಯಾವುದೇ ಸಾಲವನ್ನು ಕೊಡದೇ ಇರುವುದರಿಂದ ಆರೋಪಿತನು ನಿಪಿ 1 ರಂತೆ ಇರುವ ಚೆಕ್ ನ್ನು ನನಗೆ ಕೊಡುವ ಪ್ರಶ್ನೆಯೇ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತನಿಂದ ಹಣವನ್ನು ಲಪಾಟಿಯಿಸುವ ಉದ್ದೇಶದಿಂದ ಶ್ರೀಶೈಲ ಮತ್ತು ಕಲಾವತಿಗೆ ಹಣದ ಭದ್ರತೆಗೆ ಕೊಟ್ಟ ಚೆಕ್ ಗಳನ್ನು ನಿಪಿ 1ನ್ನು ದುರುಪಯೋಗ ಪಡಿಸಿಕೊಂಡು ನಾನು ಆರೋಪಿತನ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ನನ್ನ ಹೆಸರು, ಹಣ ಹಾಗೂ ದಿನಾಂಕವನ್ನು ಆರೋಪಿತನೇ ಬರೆದುಕೊಟ್ಟಿರುತ್ತಾನೆ. ಸಾಕ್ಷಿಯು ಮುಂದುವರೆದು ಆರೋಪಿತನು ಬೇರೆಯವರಿಂದ ಬರೆಯಿಸಿಕೊಟ್ಟಿರುತ್ತಾನೆ. ಯಾರಿಂದ ಬರೆಯಿಸಿಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ 1 ರಲ್ಲಿ ನನ್ನ ಹೆಸರು, ಹಣ ಹಾಗೂ ದಿನಾಂಕವನ್ನು ಬೇರೆ ಬೇರೆ ಲೇಖನಿಗಳಿಂದ ಬರೆಯಲಾಗಿರುತ್ತದೆ ಎಂದರೆ ಸಾಕ್ಷಿಯು ಒಂದೇ ಲೇಖನಿಯಿಂದ ಬರೆಯಲಾಗಿರುತ್ತದೆ ಎಂದು ಹೇಳುತ್ತಾರೆ. ನಿಪಿ 1 ನ್ನು ದಿಃ 14.04.2022 ರಂದು ಶ್ರೀಶೈಲ ಹಾಗೂ ಕಲಾವತಿ ಇವರು ಸಿದ್ದವ್ವಳಿಗೆ ಕೊಟ್ಟ 5 ಲಕ್ಷ ರೂಪಾಯಿಗಳ ಭದ್ರತೆಗೆ ಕೊಟ್ಟ ಖಾಲಿ ಚೆಕ್ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಖಾಲಿ ಚೆಕ್ ಮೇಲೆ ನನ್ನ ಹೆಸರು ಬರೆದು ಬ್ಯಾಂಕಗೆ

ನಗದೀಕರಣಕ್ಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಆಂಗ್ಲ್ ಹಾಗೂ ಕನ್ನಡ ಭಾಷೆಯಲ್ಲಿ ಬರೆಯಲಾಗಿದೆ ಎಂದರೆ ನಿಜ. ನನ್ನ ಹಾಗೂ ಆರೋಪಿತನ ನಡುವೆ ಇಲ್ಲಿಯವರೆಗೆ ಯಾವುದೇ ಹಣದ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತನಿಗೆ ಯಾವುದೇ ಸಾಲವನ್ನು ಕೊಡದೇ ಇದ್ದ ಕಾರಣ ಆರೋಪಿತನು ನಿಪಿ 1 ನ್ನು ನನಗೆ ಕೊಡುವ ಪ್ರಶ್ನೇ ಇರುವುದಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದರಿಂದ ಆಲಿಸಿ ಸಮಯವನ್ನು ನೀಡಿ ಮುಂದೂಡಲಾಯಿತು.**

*(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).*

ಓ ಹೇ ಕೇ ಸರಿ ಇದೆ

**ಪ್ರ.ದ.ನ್ಯಾ.ದಂ. ಕಿತ್ತೂರು.**